## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:-** ರಾಯಚೂರು ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗದಲ್ಲಿ 2008-09 ನೇ ಸಾಲಿನ 12ನೇ ಹಣಕಾಸು ಆಯೋಗದ ರಸ್ತೆ ಕಾಮಗಾರಿಗಳಿಗೆ ಬಿಡುಗಡೆಯಾದ ಅನುದಾನವನ್ನು ಉದ್ದೇಶಿತ ಯೋಜನೆಗಳಿಗೆ ಬಳಸದೇ ಬೇರೆ ಕಾಮಗಾರಿಗಳಿಗೆ ವಿನಿಯೋಗಿಸಿರುವ ಆರೋಪಗಳ ಕುರಿತು ಇಲಾಖಾ ವಿಚಾರಣೆ ಪ್ರಕರಣ-ಮಾನ್ಯ ಕರ್ನಾಟಕ ಆಡಳಿತ ನ್ಯಾಯ ಮಂಡಳಿಯ ಅರ್ಜಿ ಸಂಖ್ಯೆ:20649-20663/2020 ರಲ್ಲಿ ನೀಡಿರುವ ಆದೇಶ ದಿನಾಂಕ:02.07.2021 ರಂತೆ ಇಲಾಖಾ ವಿಚಾರಣೆ ಕೈಬಿಡುವ ಬಗ್ಗೆ- ಆದೇಶ

**ಓದಲಾಗಿದೆ:-**

1. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ರಾಯಚೂರು ಇವರ ಪತ್ರ ಸಂಖ್ಯೆ:ಜಿಪರಾ/ರ&ಸೇ/12th **F.C**/32/2008-09, ದಿನಾಂಕ:23.04.2015.
2. ಸರ್ಕಾರದ ಆದೇಶ ಸಂಖ್ಯೆ:ಗ್ರಾಅಪ:10/12/ಆರ್‌ಆರ್‌ಸಿ/2015, ದಿನಾಂಕ:01.06.2015
3. ಸರ್ಕಾರದ ಕಾರಣ ಕೇಳುವ ನೋಟಿಸ್ ಹಾಗೂ ಆರೋಪ ಪಟ್ಟಿ ಸಂಖ್ಯೆ: ಗ್ರಾಅಪ 73 ಇಎನ್‌ಕ್ಯೂ 2017, ದಿನಾಂಕ:07.11.2019.
4. ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 73ಇಎನ್‌ಕ್ಯೂ 2017, ಬೆಂಗಳೂರು, ದಿನಾಂಕ:14.07.2020
5. ಕರ್ನಾಟಕ ಆಡಳಿತ ನ್ಯಾಯ ಮಂಡಳಿಯ ಅರ್ಜಿ ಸಂಖ್ಯೆ: 20649-20663/2020 ರಲ್ಲಿ ನೀಡಿರುವ ಆದೇಶ ದಿನಾಂಕ:02.07.2021,
6. ಸರ್ಕಾರಿ ವಕೀಲರು, ಕೆ.ಎ.ಟಿ, ಇವರ ಪತ್ರಸಂಖ್ಯೆ: AG/KSATKLB/21-22 ದಿನಾಂಕ: 21.09.2021

*****

**ಪ್ರಸ್ತಾವನೆ:**

ರಾಯಚೂರು ಜಿಲ್ಲಾ ಪಂಚಾಯತಿ ವ್ಯಾಪ್ತಿಯಲ್ಲಿ 12 ನೇ ಹಣಕಾಸು ಆಯೋಗದ ಅನುದಾನದಡಿ ಬಿಡುಗಡೆಯಾದ ಅನುದಾನವನ್ನು ಉದ್ದೇಶಿತ ಯೋಜನೆಗಳಿಗೆ ವಿನಿಯೋಗಿಸದೇ ಬೇರೆ ಲೆಕ್ಕ ಶೀರ್ಷಿಕೆಯಡಿಯಲ್ಲಿನ ಕಾಮಗಾರಿಗಳ ಬಿಲ್ಲುಗಳಿಗೆ ಹಣ ಪಾವತಿಸಲಾಗಿದೆಯೆಂದು ಹಾಗೂ ಹಣ ಪಾವತಿಸುವ ಪೂರ್ವದಲ್ಲಿ ಸಕ್ಷಮ ಪ್ರಾಧಿಕಾರದ ಅನುಮತಿ ಪಡೆದಿರುವುದಿಲ್ಲವೆಂದು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ರಾಯಚೂರು ರವರು ಮೇಲೆ ಓದಲಾದ ಕ್ರಮಾಂಕ(1) ರ ದಿನಾಂಕ:23.04.2015 ರ ಪತ್ರದಲ್ಲಿ ಸರ್ಕಾರಕ್ಕೆ ವರದಿ ಮಾಡಿದ್ದನ್ನು ಪರಿಶೀಲಿಸಿ, ಈ ಕುರಿತಂತೆ ವಾಸ್ತವಾಂಶದ ಬಗ್ಗೆ ಕೂಲಕಂಷವಾಗಿ ಪರಿಶೀಲಿಸಿ ವರದಿ ಸಲ್ಲಿಸಲು ಮೇಲೆ ಓದಲಾದ ಕ್ರಮಾಂಕ(2) ರ ದಿನಾಂಕ:01.06.2015 ರ ಆದೇಶದಲ್ಲಿ ಶ್ರೀ ಬಸವರಾಜ್ ಮಳಿಮಠ್, ರಾಜ್ಯ ಗುಣ ನಿಯಂತ್ರಣ ಮಾನಿಟರ್ ಹಾಗೂ ಶ್ರೀ ನಿಜಾಮ್‌ಕರಿ ಭಗತ್ ರಾಜ್, ಸಹಾಯಕ ನಿಯಂತ್ರಕರು ಇವರನ್ನು ನೇಮಕ ಮಾಡಲಾಗಿತ್ತು.

ಜಿಲ್ಲಾ ಗುಣ ನಿಯಂತ್ರಣ ಮಾನಿಟರ್ ಹಾಗೂ ಸಹಾಯಕ ನಿಯಂತ್ರಕರು ಕಾಮಗಾರಿಗಳ ತಪಾಸಣೆ ನಡೆಸಿ ಸಲ್ಲಿಸಿರುವ ವರದಿಯನ್ನಾಧರಿಸಿ ದೋಷಾರೋಪಣಾ ಪಟ್ಟಿಯನ್ನು ತಯಾರಿಸಿ ಸೇವೆಯಲ್ಲಿರುವ ಈ ಕೆಳಕಂಡ ಅಧಿಕಾರಿ/ನೌಕರರ ವಿರುದ್ಧ ಕರ್ನಾಟಕ ನಾಗರೀಕ ಸೇವಾ (ವ.ನಿ.ಮೇ) ನಿಯಮಗಳು 1957 ರ ನಿಯಮ 11 ರ ಅನುಸಾರ ಇಲಾಖಾ ವಿಚಾರಣೆ ನಡೆಸಲು ಉದ್ದೇಶಿಸಿ ಮೇಲೆ ಓದಲಾದ ಕ್ರಮಾಂಕ(3) ರ ದಿನಾಂಕ:07.11.2019 ರಂದು ಆರೋಪಪಟ್ಟಿ ಅನುಬಂಧ1 ರಿಂದ 4ನ್ನು ಜಾರಿ ಮಾಡಲಾಗಿತ್ತು.

1. ಶ್ರೀ ಕೆ.ಶಂಕರ್, ಹಿಂದಿನ ಸ.ಕಾ.ಇಂ, ಪಂ.ರಾ.ಇಂ ಉಪವಿಭಾಗ, ರಾಯಚೂರು
2. ಶ್ರೀ ಗಣಪತಿ ಸಾಕರೆ, ಹಿಂದಿನ ಸ.ಕಾ.ಇಂ, ಪಂ.ರಾ.ಇಂ ಉಪವಿಭಾಗ, ಮಾನ್ವಿ
3. ಶ್ರೀ ಸಂಜೀವ್ ಕುಮಾರ್, ಹಿಂದಿನ ಪ್ರಭಾರಿ, ಸ.ಕಾ.ಇಂ, ಪಂ.ರಾ.ಇಂ ಉಪವಿಭಾಗ, ದೇವದುರ್ಗ
4. ಶ್ರೀ ಎ.ಆಂಜನೇಯ, ಹಿಂದಿನ ಸ.ಕಾ.ಇಂ, ಪಂ.ರಾ.ಇಂ ಉಪವಿಭಾಗ, ಲಿಂಗಸೂಗೂರು
5. ಶ್ರೀ ಎಸ್.ಎಂ.ಅಸ್ಲಂ, ಹಿಂದಿನ ಕಿ.ಇಂ, ಪಂ.ರಾ.ಇಂ ಉಪವಿಭಾಗ, ರಾಯಚೂರು
6. ವಾಜೀದ್ ಅಲಿ, ಹಿಂದಿನ ಕಿ.ಇಂ, ಪಂ.ರಾ.ಇಂ ಉಪವಿಭಾಗ, ರಾಯಚೂರು
7. ಶ್ರೀ ಎಸ್.ನಿರಂಜನ, ಹಿಂದಿನ ಕಿ.ಇಂ, ಪಂ.ರಾ.ಇಂ ಉಪವಿಭಾಗ, ರಾಯಚೂರು
8. ಶ್ರೀ ನರಸಿಂಗಪ್ಪ, ಹಿಂದಿನ ಕಿ.ಇಂ, ಪಂ.ರಾ.ಇಂ ಉಪವಿಭಾಗ, ಮಾನ್ವಿ
9. ಶ್ರೀ ಜಹೀರುದ್ದೀನ್, ಹಿಂದಿನ ಕಿ.ಇಂ, ಪಂ.ರಾ.ಇಂ ಉಪವಿಭಾಗ, ಮಾನ್ವಿ
10. ಶ್ರೀ ಸುನೀಲ, ಹಿಂದಿನ ಕಿ.ಇಂ, ಪಂ.ರಾ.ಇಂ ಉಪವಿಭಾಗ, ಮಾನ್ವಿ
11. ಶ್ರೀ ಪ್ರಕಾಶ್, ಹಿಂದಿನ ಸ.ಇಂ, ಪಂ.ರಾ.ಇಂ ಉಪವಿಭಾಗ, ಲಿಂಗಸೂಗೂರು
12 ಶ್ರೀ ಶೇಖಪ್ಪ, ಹಿಂದಿನ ಕಿ.ಇಂ, ಪಂ.ರಾ.ಇಂ ಉಪವಿಭಾಗ, ದೇವದುರ್ಗ
13. ಶ್ರೀ ಜಿ.ಎನ್.ಪ್ರಕಾಶ್, ಹಿಂದಿನ ಸ.ಇಂ, ಪಂ.ರಾ.ಇಂ ಉಪವಿಭಾಗ, ಮಾನ್ವಿ
14. ಶ್ರೀ ಪರಶುರಾಮ, ಹಿಂದಿನ ಕಿ.ಇಂ, ಪಂ.ರಾ.ಇಂ ಉಪವಿಭಾಗ, ದೇವದುರ್ಗ
15. ಶ್ರೀ ಚಂದ್ರಕಾಂತ್, ಹಿಂದಿನ ಕಿ.ಇಂ, ಪಂ.ರಾ.ಇಂ ಉಪವಿಭಾಗ, ದೇವದುರ್ಗ
16. ಶ್ರೀ ಶಿವಪ್ಪ, ಹಿಂದಿನ ಕಿ.ಇಂ, ಪಂ.ರಾ.ಇಂ ಉಪವಿಭಾಗ, ದೇವದುರ್ಗ.
17. ಶ್ರೀ ಖತಾಲ ಹುಸೇನ, ಹಿಂದಿನ ಕಿ.ಇಂ, ಪಂ.ರಾ.ಇಂ ಉಪವಿಭಾಗ, ರಾಯಚೂರು
18. ಶ್ರೀ ಎಫ್.ಶಿವಕುಮಾರ್, ಹಿಂದಿನ ಕಿ.ಇಂ, ಪಂ.ರಾ.ಇಂ ಉಪವಿಭಾಗ, ಮಾನ್ವಿ
19. ಶ್ರೀ ಸಂದೀಪ್, ಹಿಂದಿನ ಕಿ.ಇಂ, ಪಂ.ರಾ.ಇಂ ಉಪವಿಭಾಗ, ಲಿಂಗಸೂಗೂರು
20. ಶ್ರೀ ಮೊಗಾರೆ, ಹಿಂದಿನ ಕಿ.ಇಂ, ಪಂ.ರಾ.ಇಂ ಉಪವಿಭಾಗ, ಸಿಂಧನೂರು
21. ಶ್ರೀ ಅಬ್ದುಲ್ ರಹೀಂ, ಹಿಂದಿನ ದ್ವಿ.ದ.ಲೆ.ಸ, ಪಂ.ರಾ.ಇಂ ವಿಭಾಗ, ರಾಯಚೂರು
22. ಶ್ರೀ ವೆಂಕಟೇಶ, ಹಿಂದಿನ ದ್ವಿ.ದ.ಲೆ.ಸ, ಪಂ.ರಾ.ಇಂ ವಿಭಾಗ, ರಾಯಚೂರು
23. ಶ್ರೀ ನಟರಾಜ, ಹಿಂದಿನ ದ್ವಿ.ದ.ಲೆ.ಸ, ಪಂ.ರಾ.ಇಂ ವಿಭಾಗ, ರಾಯಚೂರು
24. ಶ್ರೀ ಬಿ.ಆರ್.ದಿಲೀಪ್, ಹಿಂದಿನ ಪ್ರ.ದ.ಲೆ.ಸ, ಪಂ.ರಾ.ಇಂ ವಿಭಾಗ, ರಾಯಚೂರು

ಆರೋಪ ಪಟ್ಟಿ ಜಾರಿ ಮಾಡಿದ ಅಧಿಕಾರಿ/ನೌಕರರ ಪೈಕಿ 1) ಶ್ರೀ ಕೆ.ಶಂಕರ್, ಹಿಂದಿನ ಸ.ಕಾ.ಇಂ 2) ಶ್ರೀ ಸಂಜೀವ್ ಕುಮಾರ್, ಸ.ಕಾ.ಇಂ, 3)ಶ್ರೀ ವಾಜೀದ್ ಅಲಿ, ಹಿಂದಿನ ಕಿ.ಇಂ 4)ಶ್ರೀ ಸುನೀಲ್, ಕಿ.ಇಂ ಹಾಗೂ 5) ಶ್ರೀ ಶೇಖಪ್ಪ, ಕಿ.ಇಂ 6)ಶ್ರೀ ಜಿ.ಎನ್.ಪ್ರಕಾಶ್,ಹಿಂದಿನ ಸ.ಇಂ ಇವರುಗಳು ಯಾವುದೇ ವಿವರಣೆ ಸಲ್ಲಿಸಿರುವುದಿಲ್ಲ. ಉಳಿದ ಆಪಾದಿತ ಅಧಿಕಾರಿ/ನೌಕರರು ವಿವರಣೆಯನ್ನು ಸಲ್ಲಿಸಿ ತಮ್ಮ ವಿರುದ್ಧದ ಆರೋಪಗಳನ್ನು ಕೈಬಿಡುವಂತೆ ಕೋರಿದ್ದರು.

ಸರ್ಕಾರವು ಶ್ರೀ ಬಸವರಾಜ್ ಮಳಿಮಠ್, ರಾಜ್ಯ ಗುಣ ನಿಯಂತ್ರಣ ಮಾನಿಟರ್ ಹಾಗೂ ಶ್ರೀ ನಿಜಾಮ್‌ಕರಿ ಭಗತ್ ರಾಜ್, ಸಹಾಯಕ ನಿಯಂತ್ರಕರು ಇವರುಗಳು ಸಲ್ಲಿಸಿರುವ ವರದಿ ಹಾಗೂ ಆಪಾದಿತ ಅಧಿಕಾರಿ/ನೌಕರರು ಸಲ್ಲಿಸಿರುವ ವಿವರಣೆ ಮತ್ತು ದಾಖಲೆಗಳನ್ನು ಪರಿಶೀಲಿಸಿರುತ್ತದೆ. ಆಪಾದಿತ ಅಧಿಕಾರಿ/ನೌಕರರು ಕ್ರಿಯಾ ಯೋಜನೆಯಲ್ಲಿ ಸೇರಿಲ್ಲದ ಕಾಮಗಾರಿಗಳನ್ನು ಅನುಷ್ಠಾನಗೊಳಿಸಿದ್ದು, ನಂತರದಲ್ಲಿ ಸದರಿ ಕ್ರಮಕ್ಕೆ ಘಟನೋತ್ತರ ಅನುಮೋದನೆಯನ್ನು ಪಡೆದಿರುವುದು ಕಂಡುಬರುವುದಿಲ್ಲ. ಆದ್ದರಿಂದ ಇದೊಂದು ತೀವ್ರ ಸ್ವರೂಪದ ಕರ್ತವ್ಯಲೋಪವಾಗಿರುತ್ತದೆ. ಆದ್ದರಿಂದ ಪ್ರಕರಣದಲ್ಲಿ ಭಾಗಿಯಾಗಿರುವ ಆಪಾದಿತರ ವಿರುದ್ಧದ ಆರೋಪಗಳ ಬಗ್ಗೆ ವಿವರವಾದ ಇಲಾಖಾ ವಿಚಾರಣೆಯನ್ನು ನಡೆಸುವುದು ಅಗತ್ಯವೆಂದು ಸರ್ಕಾರವು ನಿರ್ಧರಿಸಿ ಮೇಲೆ ಓದಲಾದ ಕ್ರಮಾಂಕ(4)ರ ದಿನಾಂಕ: 14.07.2020,ರ ಆದೇಶದಲ್ಲಿ ಈ ಕೆಳಕಂಡ ಅಧಿಕಾರಿ/ನೌಕರರ ವಿರುದ್ಧದ ಆರೋಪಗಳಿಗೆ ಸಂಬಂಧಿಸಿದಂತೆ ಜಂಟಿ ಇಲಾಖಾ ವಿಚಾರಣೆಯನ್ನು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು 1957 ರ ನಿಯಮ11 ಮತ್ತು 13 ರ ಅನುಸಾರ ನಡೆಸಲು ಸದರಿ ನಿಯಮಗಳ ನಿಯಮ 11(2) ರಡಿ ನಡೆಸಲು ಶ್ರೀ ರಾಜು ಡಾಂಗೆ, ಅಧೀಕ್ಷಕ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ವೃತ್ತ, ಕಲಬುರಗಿ ಇವರನ್ನು ವಿಚಾರಣಾಧಿಕಾರಿಯನ್ನಾಗಿ ನೇಮಿಸಿ ಆದೇಶಿಸಲಾಗಿತ್ತು.

1. ಶ್ರೀ ಕೆ.ಶಂಕರ್, ಹಿಂದಿನ ಸ.ಕಾ.ಇಂ, ಪಂ.ರಾ.ಇಂ ಉಪವಿಭಾಗ, ರಾಯಚೂರು
2. ಶ್ರೀ ಗಣಪತಿ ಸಾಕರೆ, ಹಿಂದಿನ ಸ.ಕಾ.ಇಂ, ಪಂ.ರಾ.ಇಂ ಉಪವಿಭಾಗ, ಮಾನ್ವಿ
3. ಶ್ರೀ ಸಂಜೀವ್ ಕುಮಾರ್, ಹಿಂದಿನ ಪ್ರಭಾರಿ, ಸ.ಕಾ.ಇಂ, ಪಂ.ರಾ.ಇಂ ಉಪವಿಭಾಗ, ದೇವದುರ್ಗ
4. ಶ್ರೀ ಎ.ಆಂಜನೇಯ, ಹಿಂದಿನ ಸ.ಕಾ.ಇಂ, ಪಂ.ರಾ.ಇಂ ಉಪವಿಭಾಗ, ಲಿಂಗಸೂಗೂರು
5. ಶ್ರೀ ಎಸ್.ಎಂ.ಅಸ್ಲಂ, ಹಿಂದಿನ ಕಿ.ಇಂ, ಪಂ.ರಾ.ಇಂ ಉಪವಿಭಾಗ, ರಾಯಚೂರು
6. ವಾಜೀದ್ ಅಲಿ, ಹಿಂದಿನ ಕಿ.ಇಂ, ಪಂ.ರಾ.ಇಂ ಉಪವಿಭಾಗ, ರಾಯಚೂರು
7. ಶ್ರೀ ಎಸ್.ನಿರಂಜನ, ಹಿಂದಿನ ಕಿ.ಇಂ, ಪಂ.ರಾ.ಇಂ ಉಪವಿಭಾಗ, ರಾಯಚೂರು
8. ಶ್ರೀ ನರಸಿಂಗಪ್ಪ, ಹಿಂದಿನ ಕಿ.ಇಂ, ಪಂ.ರಾ.ಇಂ ಉಪವಿಭಾಗ, ಮಾನ್ವಿ
9. ಶ್ರೀ ಜಹೀರುದ್ದೀನ್, ಹಿಂದಿನ ಕಿ.ಇಂ, ಪಂ.ರಾ.ಇಂ ಉಪವಿಭಾಗ, ಮಾನ್ವಿ
10. ಶ್ರೀ ಸುನೀಲ, ಹಿಂದಿನ ಕಿ.ಇಂ, ಪಂ.ರಾ.ಇಂ ಉಪವಿಭಾಗ, ಮಾನ್ವಿ
11. ಶ್ರೀ ಪ್ರಕಾಶ್, ಹಿಂದಿನ ಸ.ಇಂ, ಪಂ.ರಾ.ಇಂ ಉಪವಿಭಾಗ, ಲಿಂಗಸೂಗೂರು
12. ಶ್ರೀ ಶೇಖಪ್ಪ, ಹಿಂದಿನ ಕಿ.ಇಂ, ಪಂ.ರಾ.ಇಂ ಉಪವಿಭಾಗ, ದೇವದುರ್ಗ
13. ಶ್ರೀ ಜಿ.ಎನ್.ಪ್ರಕಾಶ್, ಹಿಂದಿನ ಸ.ಇಂ, ಪಂ.ರಾ.ಇಂ ಉಪವಿಭಾಗ, ಮಾನ್ವಿ
14. ಶ್ರೀ ಪರಶುರಾಮ, ಹಿಂದಿನ ಕಿ.ಇಂ, ಪಂ.ರಾ.ಇಂ ಉಪವಿಭಾಗ, ದೇವದುರ್ಗ
15. ಶ್ರೀ ಚಂದ್ರಕಾಂತ್, ಹಿಂದಿನ ಕಿ.ಇಂ, ಪಂ.ರಾ.ಇಂ ಉಪವಿಭಾಗ, ದೇವದುರ್ಗ
16. ಶ್ರೀ ಶಿವಪ್ಪ, ಹಿಂದಿನ ಕಿ.ಇಂ, ಪಂ.ರಾ.ಇಂ ಉಪವಿಭಾಗ, ದೇವದುರ್ಗ
17. ಶ್ರೀ ಖತಾಲ ಹುಸೇನ, ಹಿಂದಿನ ಕಿ.ಇಂ, ಪಂ.ರಾ.ಇಂ ಉಪವಿಭಾಗ, ರಾಯಚೂರು
18. ಶ್ರೀ ಎಫ್.ಶಿವಕುಮಾರ್, ಹಿಂದಿನ ಕಿ.ಇಂ, ಪಂ.ರಾ.ಇಂ ಉಪವಿಭಾಗ, ಮಾನ್ವಿ
19. ಶ್ರೀ ಸಂದೀಪ್, ಹಿಂದಿನ ಕಿ.ಇಂ, ಪಂ.ರಾ.ಇಂ ಉಪವಿಭಾಗ, ಲಿಂಗಸೂಗೂರು
20. ಶ್ರೀ ಮೊಗಾರೆ, ಹಿಂದಿನ ಕಿ.ಇಂ, ಪಂ.ರಾ.ಇಂ ಉಪವಿಭಾಗ, ಸಿಂಧನೂರು
21. ಶ್ರೀ ಅಬ್ದುಲ್ ರಹೀಂ, ಹಿಂದಿನ ದ್ವಿ.ದ.ಲೆ.ಸ, ಪಂ.ರಾ.ಇಂ ವಿಭಾಗ, ರಾಯಚೂರು
22. ಶ್ರೀ ವೆಂಕಟೇಶ, ಹಿಂದಿನ ದ್ವಿ.ದ.ಲೆ.ಸ, ಪಂ.ರಾ.ಇಂ ವಿಭಾಗ, ರಾಯಚೂರು
23. ಶ್ರೀ ನಟರಾಜ, ಹಿಂದಿನ ದ್ವಿ.ದ.ಲೆ.ಸ, ಪಂ.ರಾ.ಇಂ ವಿಭಾಗ, ರಾಯಚೂರು
24. ಶ್ರೀ ಬಿ.ಆರ್.ದಿಲೀಪ್, ಹಿಂದಿನ ಪ್ರ.ದ.ಲೆ.ಸ, ಪಂ.ರಾ.ಇಂ ವಿಭಾಗ, ರಾಯಚೂರು

ಸರ್ಕಾರದ ದಿನಾಂಕ: 14.07.2020ರ ಆದೇಶವನ್ನು ಪ್ರಶ್ನಿಸಿ ಶ್ರೀ ಶೇಖ್ ಮಹಮ್ಮದ್ ಅಸ್ಲಾಂ, ಸಹಾಯಕ ಇಂಜಿನಿಯರ್ ಹಾಗೂ ಇತರರ 14 ಅಪಾದಿತ ಅಧಿಕಾರಿ/ನೌಕರರು ಕರ್ನಾಟಕ ಆಡಳಿತ ನ್ಯಾಯ ಮಂಡಳಿಯಲ್ಲಿ ಅರ್ಜಿ ಸಂಖ್ಯೆ 20649-20669/2020 ನ್ನು ಸಲ್ಲಿಸಿದ್ದರು. ಸದರಿ ಅರ್ಜಿಗೆ ಸಂಬಂಧಿಸಿದಂತೆ ಮಾನ್ಯ ಆಡಳಿತ ನ್ಯಾಯ ಮಂಡಳಿಯು ಮೇಲೆ ಓದಲಾದ ಕ್ರ.ಸಂ.(5) ರಲ್ಲಿ ದಿನಾಂಕ:02.07.2021 ರ ಅಂತಿಮ ಆದೇಶದಲ್ಲಿ ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 73 ಇಎನ್ ಕ್ಯೂ 2017 ದಿನಾಂಕ:14.07.2020ನ್ನು ರದ್ದುಪಡಿಸಿರುತ್ತದೆ.

ಸರ್ಕಾರಿ ವಕೀಲರು ಕರ್ನಾಟಕ ಆಡಳಿತ ಮಂಡಳಿ ಕಲಬುರಗಿ ಪೀಠ ರವರು ಮೇಲೆ ಓದಲಾದ ಕ್ರ.ಸಂ.(6) ರಲ್ಲಿ ಓದಲಾದ ದಿನಾಂಕ:21.09.2021 ರಂದು ಬರೆದಿರುವ ಪತ್ರದಲ್ಲಿ ಮಾನ್ಯ ಕರ್ನಾಟಕ ಆಡಳಿತ ಮಂಡಳಿ ಕಲಬುರಗಿ ಪೀಠವು ಅರ್ಜಿ ಸಂಖ್ಯೆ:20649-20663/2020 ರಲ್ಲಿ ದಿನಾಂಕ:02.07.2021 ರಂದು ನೀಡಿರುವ ಆದೇಶದ ವಿರುದ್ಧ ಮೇಲ್ಮನವಿ ಸಲ್ಲಿಸಲು ಅರ್ಹ ಪ್ರಕರಣವಾಗಿರುವುದಿಲ್ಲ ಎಂದು ಅಭಿಪ್ರಾಯ ನೀಡಿರುತ್ತಾರೆ.

ಮಾನ್ಯ ಕರ್ನಾಟಕ ಆಡಳಿತ ನ್ಯಾಯ ಮಂಡಳಿಯು ಸರ್ಕಾರದ ದೋಷಾರೋಪಣಾ ಪಟ್ಟಿಯನ್ನು ರದ್ದುಪಡಿಸಲು ಪರಿಗಣಿಸಿರುವ ಅಂಶಗಳೆಂದರೆ ಸದರಿ ಪ್ರಕರಣವು 2008-09ನೇ ಸಾಲಿನಲ್ಲಿ ಕೈಗೊಂಡ ರಸ್ತೆ ಕಾಮಗಾರಿಗಳಿಗೆ ಸಂಬಂಧಿಸಿದ್ದು. ಪ್ರಕರಣದಲ್ಲಿನ ಅರ್ಜಿದಾರರುಗಳು ಸಹಾಯಕ/ಕಿರಿಯ ಇಂಜಿನಿಯರ್ ಗಳಾಗಿ ಕ್ಷೇತ್ರ ಮಟ್ಟದಲ್ಲಿ ಕಾಮಗಾರಿಗಳನ್ನು ಅನುಷ್ಠಾನಗೊಳಿಸುವ ಜವಾಬ್ದಾರಿಯನ್ನು ಮಾತ್ರ ಹೊಂದಿದವರಾಗಿರುತ್ತಾರೆ. ಇವರು ಕೇವಲ ಕಾಮಗಾರಿಗಳನ್ನು ಅನುಷ್ಠಾನ ಗೊಳಿಸುವುದಷ್ಟೇ ಇವರ ಕೆಲಸವಾಗಿದ್ದು, ಹಣ ಪಾವತಿಸುವ ವಿಷಯವು ಇವರಿಗೆ ಸಂಬಂಧಿಸಿರುವುದಿಲ್ಲ. ಇವರು ಮೇಲಾಧಿಕಾರಿಗಳ ಸೂಚನೆ/ಆದೇಶದ ಮೇರೆಗೆ ಕೆಲಸ ನಿರ್ವಹಿಸುವ ಜವಾಬ್ದಾರಿಯನ್ನು ಹೊಂದಿರುತ್ತಾರೆ., ಅಲ್ಲದೇ, ಕಾಮಗಾರಿಗಳನ್ನು ಅನುಷ್ಠಾನಗೊಳಿಸಿದ ಸುಮಾರು 13 ವರ್ಷಗಳ ನಂತರ ವಿಚಾರಣಾಧಿಕಾರಿಯವರನ್ನು ನೇಮಿಸಿರುವುದು ಸರಿಯಾದ ಕ್ರಮವಾಗಿರುವುದಿಲ್ಲವೆಂದು ಮಾನ್ಯ ಸರ್ವೋಚ್ಚ ನ್ಯಾಯಾಲಯವು ಪಿ.ವಿ. ಮಹದೇವನ್ ವಿರುದ್ಧ ತಮಿಳುನಾಡು ಗೃಹ ಮಂಡಳಿ ಪ್ರಕರಣದಲ್ಲಿ ನೀಡಿರುವ ತೀರ್ಪನ್ನು ಪರಿಗಣಿಸಿ ವಿಚಾರಣಾಧಿಕಾರಿಗಳ ನೇಮಕ ಹಾಗೂ ಸರ್ಕಾರದ ದೋಷಾರೋಪಣಾ ಪಟ್ಟಿಯನ್ನು ರದ್ದುಪಡಿಸಿರುತ್ತದೆ.

ಸರ್ಕಾರವು ಸದರಿ ಪ್ರಕರಣಕ್ಕೆ ಸಂಬಂಧಪಟ್ಟ ವರದಿ/ದಾಖಲೆಗಳನ್ನು ಹಾಗೂ ಕರ್ನಾಟಕ ಆಡಳಿತ ನ್ಯಾಯ ಮಂಡಳಿಯ ದಿನಾಂಕ:02.07.2021 ರ ಆದೇಶವನ್ನು ಪರಿಶೀಲಿಸಿರುತ್ತದೆ. ಸದರಿ ಪ್ರಕರಣದಲ್ಲಿ ಪ್ರಮುಖವಾಗಿ 12ನೇ ಹಣಕಾಸು ಆಯೋಗದ ಯೋಜನೆಯಡಿ ಕ್ರಿಯಾ ಯೋಜನೆಯಲ್ಲಿರುವ ಹಾಗೂ ಸರ್ಕಾರದಿಂದ ಅನುಮೋದಿತ ರಸ್ತೆ ಮತ್ತು ಸೇತುವೆ ಕಾಮಗಾರಿಗಳನ್ನು ಹೊರತುಪಡಿಸಿ, ಬೇರೆ ಯಾವುದೇ ಕಾಮಗಾರಿಗಳನ್ನು ಮಾಡತಕ್ಕದ್ದಲ್ಲವೆಂದು ಸ್ಪಷ್ಟಪಡಿಸಿದ್ದರೂ ಸಹ ಈ ಮಾರ್ಗಸೂಚಿಗಳನ್ನು ಪಾಲಿಸದೇ, ಕ್ರಿಯಾ ಯೋಜನೆಗೆ ಸೇರಿರದ, ಬೇರೆ ಯೋಜನೆಯಡಿ ಅನುಷ್ಠಾನಗೊಳಿಸಿರುವ ಕಾಮಗಾರಿಗಳಿಗೆ ಹಣ ಪಾವತಿಸುವ ಮೂಲಕ 12ನೇ ಹಣಕಾಸು ಆಯೋಗದ ಮಾರ್ಗಸೂಚಿಗಳನ್ನು ಉಲ್ಲಂಘಿಸಿರುತ್ತೀರಿ ಎಂದು ಆರೋಪಿಸಿದ್ದು, ಆದರೆ ಕಾಮಗಾರಿಗಳ ಅನುಷ್ಠಾನದಲ್ಲಿ ಯಾವುದೇ ಲೋಪವಾಗಿಲ್ಲದಿರುವುದರಿಂದ ಸರ್ಕಾರಕ್ಕೆ ಯಾವುದೇ ಆರ್ಥಿಕ ನಷ್ಟ ಉಂಟಾಗಿರುವುದಿಲ್ಲ. ಆದ್ದರಿಂದ ಕರ್ನಾಟಕ ಆಡಳಿತ ನ್ಯಾಯ ಮಂಡಳಿಯು ಅರ್ಜಿ ಸಂಖ್ಯೆ:20649-20663/2020 ರಲ್ಲಿ ದಿನಾಂಕ:02.07.2021 ರಂದು ನೀಡಿರುವ ಆದೇಶವನ್ನು ಒಪ್ಪಿ,ಅರ್ಜಿದಾರರಿಗೆ ಸೀಮಿತವಾಗಿ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು 1957 ರ ನಿಯಮ11 ಮತ್ತು 13 ರ ಅನುಸಾರ ನಡೆಸಲು ಸದರಿ ನಿಯಮಗಳ

..5

ನಿಯಮ 11(2) ರಡಿ ನಡೆಸಲಾದ ಜಂಟಿ ಇಲಾಖಾ ವಿಚಾರಣೆಯ ಪ್ರಕರಣವನ್ನು ಮುಕ್ತಾಯಗೊಳಿಸಲು ತೀರ್ಮಾನಿಸಿದೆ.ಆದ್ದರಿಂದ ಈ ಕೆಳಕಂಡ ಆದೇಶ.

**ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 117 ಜಿಪಲ 2020, ಬೆಂಗಳೂರು, ದಿನಾಂಕ:19.01.2022**

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ ರಾಯಚೂರು ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗದಲ್ಲಿ 2008-09 ನೇ ಸಾಲಿನ 12ನೇ ಹಣಕಾಸು ಆಯೋಗದ ರಸ್ತೆ ಕಾಮಗಾರಿಗಳಿಗೆ ಬಿಡುಗಡೆಯಾದ ಅನುದಾನವನ್ನು ಉದ್ದೇಶಿತ ಯೋಜನೆಗಳಿಗೆ ಬಳಸದೇ ಬೇರೆ ಕಾಮಗಾರಿಗಳಿಗೆ ವಿನಿಯೋಗಿಸಿರುವ ಆರೋಪಗಳ ಕುರಿತು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು 1957 ರ ನಿಯಮ 11 ಮತ್ತು 13 ರ ಅನುಸಾರ ನಡೆಸಲು ಸದರಿ ನಿಯಮಗಳ ನಿಯಮ 11(2) ರಡಿ ಜಂಟಿ ಇಲಾಖಾ ವಿಚಾರಣೆಯನ್ನು ನಡೆಸಲು ವಹಿಸಲಾಗಿದ್ದ ಸರ್ಕಾರದ ಆದೇಶಸಂಖ್ಯೆ: ಗ್ರಾಅಪ 73 ಇಎನ್ ಕ್ಯೂ 2017 ದಿನಾಂಕ:14.07.2020ರ ಆದೇಶವನ್ನು ಮಾನ್ಯ ಕರ್ನಾಟಕ ಆಡಳಿತ ನ್ಯಾಯಮಂಡಳಿಯು ರದ್ದುಪಡಿಸಿ ಆದೇಶಿಸಿರುವುದನ್ನು ಈ ಕೆಳಕಂಡ ಅಧಿಕಾರಿ/ನೌಕರರುಗಳಿಗೆ ಸೀಮಿತವಾಗಿ ಮಾತ್ರ ಅಂಗೀಕರಿಸಿ ಪ್ರಕರಣವನ್ನು ಈ ಹಂತಕ್ಕೆ ಮುಕ್ತಾಯಗೊಳಿಸಿ ಆದೇಶಿಸಿದೆ.

1. ಶ್ರೀ ಶೇಖ್ ಮೊಹಮ್ಮದ್ ಅಸ್ಲಂ, ಹಿಂದಿನ ಕಿ.ಇಂ, ಪಂ.ರಾ.ಇಂ ಉಪವಿಭಾಗ, ರಾಯಚೂರು
2. ಶ್ರೀ ಸುನೀಲ್ ಕುಮಾರ್, ಹಿಂದಿನ ಕಿ.ಇಂ, ಪಂ.ರಾ.ಇಂ ಉಪವಿಭಾಗ, ಮಾನ್ವಿ.
3. ಶ್ರೀ ಶಿವಪ್ಪ, ಹಿಂದಿನ ಕಿ.ಇಂ, ಪಂ.ರಾ.ಇಂ ಉಪವಿಭಾಗ, ದೇವದುರ್ಗ.
4. ಶ್ರೀ ಜಹೀರುದ್ದೀನ್, ಹಿಂದಿನ ಕಿ.ಇಂ, ಪಂ.ರಾ.ಇಂ ಉಪವಿಭಾಗ, ಮಾನ್ವಿ
5. ಶ್ರೀ ಪರಶುರಾಮ, ಹಿಂದಿನ ಕಿ.ಇಂ, ಪಂ.ರಾ.ಇಂ ಉಪವಿಭಾಗ, ದೇವದುರ್ಗ
6. ಶ್ರೀ ಎಫ್.ಶಿವಕುಮಾರ್, ಹಿಂದಿನ ಕಿ.ಇಂ, ಪಂ.ರಾ.ಇಂ ಉಪವಿಭಾಗ, ಮಾನ್ವಿ
7. ಶ್ರೀ ನರಸಿಂಗಪ್ಪ, ಹಿಂದಿನ ಕಿ.ಇಂ, ಪಂ.ರಾ.ಇಂ ಉಪವಿಭಾಗ, ಮಾನ್ವಿ
8. ಶ್ರೀ ಶೇಖಪ್ಪ, ಹಿಂದಿನ ಕಿ.ಇಂ, ಪಂ.ರಾ.ಇಂ ಉಪವಿಭಾಗ, ದೇವದುರ್ಗ
9. ಶ್ರೀ ಸಂಜೀವ್ ಕುಮಾರ್, ಹಿಂದಿನ ಪ್ರಭಾರಿ, ಸ.ಕಾ.ಇಂ, ಪಂ.ರಾ.ಇಂ ಉಪವಿಭಾಗ, ದೇವದುರ್ಗ
10. ಶ್ರೀ ಖತಾಲ ಹುಸೇನ, ಹಿಂದಿನ ಕಿ.ಇಂ, ಪಂ.ರಾ.ಇಂ ಉಪವಿಭಾಗ, ರಾಯಚೂರು
11. ಶ್ರೀ ಮೊಗಾರೆ, ಹಿಂದಿನ ಕಿ.ಇಂ, ಪಂ.ರಾ.ಇಂ ಉಪವಿಭಾಗ, ಸಿಂಧನೂರು
12. ಶ್ರೀ ಚಂದ್ರಕಾಂತ್, ಹಿಂದಿನ ಕಿ.ಇಂ, ಪಂ.ರಾ.ಇಂ ಉಪವಿಭಾಗ, ದೇವದುರ್ಗ
13. ಶ್ರೀ ಸಂದೀಪ್, ಹಿಂದಿನ ಕಿ.ಇಂ, ಪಂ.ರಾ.ಇಂ ಉಪವಿಭಾಗ, ಲಿಂಗಸೂಗೂರು
14. ಶ್ರೀ ಪ್ರಕಾಶ್, ಹಿಂದಿನ ಸ.ಇಂ, ಪಂ.ರಾ.ಇಂ ಉಪವಿಭಾಗ, ಲಿಂಗಸೂಗೂರು
15. ಶ್ರೀ ಎಸ್.ನಿರಂಜನ, ಹಿಂದಿನ ಕಿ.ಇಂ, ಪಂ.ರಾ.ಇಂ ಉಪವಿಭಾಗ, ರಾಯಚೂರು

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

19/1/22

**( ಕೆ. ನದೀಮ್ ಅಹ್ಮದ್ )**
ಸರ್ಕಾರದ ಅಧೀನ ಕಾರ್ಯದರ್ಶಿ(ಸೇವೆಗಳು-ಎ)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

**ಇವರಿಗೆ:**

1. ಮಹಾಲೇಖಪಾಲರು,(ಲೆಕ್ಕ ಪತ್ರ 1&2)/(ಆಡಿಟ್) ಕರ್ನಾಟಕ, ಬೆಂಗಳೂರು.

2. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ/ಕಾರ್ಯದರ್ಶಿ, ಲೋಕೋಪಯೋಗಿ ಇಲಾಖೆ.
3. ಮುಖ್ಯ ಇಂಜಿನಿಯರ್, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ, ಬೆಂಗಳೂರು
4. ಮುಖ್ಯ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ, ಬೆಂಗಳೂರು.
5. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ರಾಯಚೂರು.
6. ಮುಖ್ಯ ಇಂಜಿನಿಯರ್, ಸಂಪರ್ಕ ಮತ್ತು ಕಟ್ಟಡಗಳು, ಕೆ.ಆರ್.ವೃತ್ತ, ಬೆಂಗಳೂರು.
7. ಸರ್ಕಾರದ ಅಧೀನ ಕಾರ್ಯದರ್ಶಿ, ಲೋಕೋಪಯೋಗಿ, ಇಲಾಖೆ, (ಸೇವೆಗಳು-ಎ ಮತ್ತು ಸಿ).
8. ಶ್ರೀ ರಾಜು ಡಾಂಗೆ, ಅಧೀಕ್ಷಕ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ವೃತ್ತ, ಕಲಬುರಗಿ
9. ಶ್ರೀ ಉದಯಕುಮಾರ್ ಬಿ.ಹೆಚ್, ತಾಂತ್ರಿಕ ಸಹಾಯಕರು,ಪಂಚಾಯತ್ ರಾಜ್ ಇಂಜಿನಿಯರಿಂಗ್ ವೃತ್ತ, ಕಲಬುರಗಿ
10. ಸಂಬಂಧಿಸಿದ ಅಧಿಕಾರಿಗಳಿಗೆ (ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾಪಂಚಾಯತ್, ರಾಯಚೂರು ಇವರ ಮುಖಾಂತರ)
11. ಮಾನ್ಯ ಗ್ರಾ.ಅ.ಪಂ.ರಾಜ್ ಸಚಿವರ ಆಪ್ತ ಕಾರ್ಯದರ್ಶಿ.
12. ಗ್ರಾ.ಅ.ಪಂ.ರಾಜ್ ಇಲಾಖೆಯ ಪ್ರಧಾನಕಾರ್ಯದರ್ಶಿ/ಜಂಟಿಕಾರ್ಯದರ್ಶಿ/ಇವರ ಆಪ್ತ ಕಾರ್ಯದರ್ಶಿ/ಆಪ್ತ ಸಹಾಯಕರು
13. ಶಾಖಾ ರಕ್ಷಾ ಕಡತ/ಕಂಪ್ಯೂಟರ್ ಸೆಲ್/ ಹೆಚ್ಚುವರಿ ಪ್ರತಿ.